ಮಾಡಿದ್ದಾರೆ, ಆ ಭತ್ತಕ್ಕೆ ಹೆಚ್ಚು ಬೆಂಕಿ ರೋಗ ತಗುಲಿರುವಂತಹದ್ದು ಆಗಿದೆ, ಇದಕ್ಕೆ ಕಾರಣವೇನು?

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಅಧ್ಯಕ್ಷರೆ, ಈಗ ಸೀಡ್ ಕಾರ್ಪೋರೇಷನ್‌ನಿಂದ ತೆಗೆದುಕೊಂಡು ಹೋಗಿರತಕ್ಕ ಈ ಸೀಡ್‌ನಲ್ಲಿ ಇದು ನಡೆದಿದೆ ಎಂದು ತಾವು ಹೇಳಿದ್ದೀರಿ. ಬಹುಶಃ ಅದರ ಬಗ್ಗೆ ತಾವು ಈಗ ಗಮನ ಸೆಳೆದಿದ್ದೀರಿ. ಅದರ ಬಗ್ಗೆ ವಿಚಾರ ಮಾಡುತ್ತೇವೆ. ಆದರೆ ರಸಾಯನಗಳನ್ನು ಸಿಂಪಡಿಸಲಿಕ್ಕೆ ಇರತಕ್ಕದ್ದಕ್ಕೆ ನಾವೊಂದು ಕಾರ್ಯಕ್ರಮವನ್ನು ಹಾಕಿದ್ದೇವೆ. ಬೆಂಕಿ ರೋಗ ಎಂದು ಹೇಳುತ್ತಿರತಕ್ಕದ್ದು, ಸಂಪೂರ್ಣವಾಗಿ ಅದನ್ನು ನಾಶ ಮಾಡುವ ಬಗ್ಗೆ ಪ್ರಿವೆಂಟೀವ್ ಮೆಜರ್ಸ್ ಇಲ್ಲ. ರೋಗ ಬಂದಾದ ಮೇಲೆ ಅದನ್ನು ಯಾವ ರೀತಿ ಸ್ವಲ್ಪ ತಡೆಗಟ್ಟಲಿಕ್ಕೆ ಇರತಕ್ಕ ಕಾರ್ಯಕ್ರಮವನ್ನು ನಾವು ಕೈಗೊಳ್ಳುತ್ತಿದ್ದೇವೆ.

ಅಧ್ಯಕ್ಷರು:- ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ ಪ್ರಶ್ನೆಯನ್ನು ರಾಮಸ್ವಾಮಿಯವರು ಕೇಳಬೇಕು.

ಶ್ರೀ ಎ.ಟಿ.ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೆ, ನಾನು 4029ನೇ ಪ್ರಶ್ನೆಯನ್ನು ಮಾನ್ಯ ಮುಜರಾಯಿ ಸಚಿವರಲ್ಲಿ ಕೇಳುತ್ತಿದ್ದೇನೆ.

ಅಧ್ಯಕ್ಷರು:- ಮಹೇಶ್ ಚಂದ್ ಅವರು ಇಲ್ಲ. ನಾನು ಮೂರನೆಯ ಪ್ರಶ್ನೆಗೆ ಹೋಗಿದ್ದೇನೆ. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರ ಪ್ರಶ್ನೆಯನ್ನು ಮಾನ್ಯ ರಾಮಸ್ವಾಮಿಯವರು ಕೇಳಿದ್ದಾರೆ. ಮುಜರಾಯಿ ಸಚಿವರ ಮಗಳ ಮದುವೆ ಇತ್ತಲ್ಲ, ಅದರಿಂದ ಯಾರಿಗೆ ಉತ್ತರ ಹೇಳಲು ಆಥರೈಸ್ ಮಾಡಿದ್ದಾರೆ.

ಶ್ರೀ ಎಂ.ಸಿ.ನಾಣಯ್ಯ: ಆ ಪ್ರಶ್ನೆಯನ್ನು ನಂತರ ತೆಗೆದುಕೊಳ್ಳೋಣ.

ವಿಷಯ: ಚಿಕ್ಕಪೇಟೆ ಕ್ಷೇತ್ರದಲ್ಲಿ ಕೊಳಚೆ ಪ್ರದೇಶಗಳು.

499 (3044)

ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಪೇಟೆ ಕ್ಷೇತ್ರದಲ್ಲಿರುವ ಕೊಳಗೇರಿಗಳ ಸಂಖ್ಯೆ ಎಷ್ಟು ಹಾಗೂ ಅಲ್ಲಿ ವಾಸಿಸುವ ಜನತೆಯ ಸಂಖ್ಯೆ ಎಷ್ಟು?

ಆ) ಕೊಳಚೆ ನಿರ್ಮೂಲನಾ ಮಂಡಳಿಯವರು ಈ ಕ್ಷೇತ್ರದ ಕೊಳಗೇರಿಗಳನ್ನು ಅಭಿವೃದ್ಧಿಪಡಿಸಲು ಕಳೆದ ಮೂರು ವರ್ಷಗಳಿಂದ ಕೈಗೊಂಡ ಕ್ರಮ ಏನು?

ಇ) ಇದಕ್ಕಾಗಿ ವೆಚ್ಚ ಮಾಡಿದ ಮೊತ್ತವೆಷ್ಟು?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು):

ಅ) ಚಿಕ್ಕಪೇಟೆ ವಿಧಾನಸಭಾ ವ್ಯಾಪ್ತಿಯಲ್ಲಿ 8 ಕೊಳಚೆ ಪ್ರದೇಶಗಳನ್ನು ಗುರುತಿಸಿದ್ದು, ಸುಮಾರು 8964 ಜನಸಂಖ್ಯೆ ವಾಸಿಸುತ್ತಿರುವುದಾಗಿ, ಅಂದಾಜು ಮಾಡಲಾಗಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಘೋಷಿತಗೊಂಡ 6 ಕೊಳಚೆ ಪ್ರದೇಶಗಳ ಪೈಕಿ (1) ಗಿರಿಪುರ (2) ನಾಗಮ್ಮನಗರ ಮತ್ತು (3) ಅಂಜನಪ್ಪ ಗಾರ್ಡ್‌ನ್ ಕೊಳಚೆ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಾದ ಚರಂಡಿ, ರಸ್ತೆ, 6 ಆಸನವುಳ್ಳ ಶೌಚಾಲಯ ಮತ್ತು ಸ್ನಾನಗೃಹ ರಿಪೇರಿಗಳನ್ನು ಕೈಗೊಳ್ಳಲಾಗಿದೆ.

1996-97ನೇ ಸಾಲಿನಲ್ಲಿ ರಾಷ್ಟ್ರೀಯ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಅಂಜನಪ್ಪ ಗಾರ್ಡ್‌ನ್ ಕೊಳಚೆ ಪ್ರದೇಶದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಿದ್ದು, ಈ ಸಾಲಿನಲ್ಲಿ ಕಾರ್ಯಗತಗೊಳಿಸಲಾಗುವುದು.

1)	ಸಮುದಾಯ ಭವನ	- 3.00 ಲಕ್ಷ
2)	ಕಿರು ನೀರು ಸರಬರಾಜು	- 1.55 ಲಕ್ಷ
3)	ರಸ್ತೆ, ದುರಸ್ತಿ, ಚರಂಡಿ ಹಾಗೂ ಇತರೆ ಕೆಲಸಗಳು	- 1.10 ಲಕ್ಷ
4)	6 ಆಸನವುಳ್ಳ ಶೌಚಾಲಯ	- 1.00 ಲಕ್ಷ
5)	ಬೀದಿ ದೀಪಗಳು ಮತ್ತು ಕೊಳವೆ ಬಾವಿ ರಿಪೇರಿ	- 0.10 ಲಕ್ಷ
	ಒಟ್ಟು	**6.75**

ಇ) 1994-95ರಿಂದ 1996-97ನೇ ಸಾಲಿನ ಅಂತ್ಯದವರೆಗೆ ಖರ್ಚು ಮಾಡಿರುವ ಒಟ್ಟು ಹಣ 4.53 ಲಕ್ಷ ರೂ.ಗಳು

ಶ್ರೀ ಪಿ.ಎಸ್. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಚಿಕ್ಕಪೇಟೆ ಕ್ಷೇತ್ರದಲ್ಲಿರುವ ಕೊಳಗೇರಿಗಳ ಸಂಖ್ಯೆ ಎಷ್ಟು ಹಾಗೂ ಅಲ್ಲಿ ವಾಸವಾಗಿರುವ ಜನಸಂಖ್ಯೆ ಎಷ್ಟು ಎಂದು ನನ್ನ ಪ್ರಶ್ನೆ. ಅವರು 8964 ಜನಸಂಖ್ಯೆ ಎಂದು ಉತ್ತರ ಹೇಳುತ್ತಾರೆ. ಅಲ್ಲಿ ವಾಸ್ತವವಾಗಿ ಇರತಕ್ಕ ಜನಸಂಖ್ಯೆ 25 ಸಾವಿರ. ಇಲ್ಲಿ ತಪ್ಪು ಮಾಹಿತಿಯನ್ನು ಒದಗಿಸಿದ್ದಾರೆ. ಎರಡನೆಯ ಪ್ರಶ್ನೆ

ಎಂದರೆ ಕೊಳಚೆ ಮಂಡಳಿಯವರು ಮೂರು ವರ್ಷಗಳಿಂದ ಎಷ್ಟು ಕೆಲಸ ಮಾಡಿದ್ದಾರೆ ಎಂದು. ಅವರು ಕಾಮಗಾರಿ ಕೆಲಸಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಯಾವುದನ್ನೂ ಸಹ ಪೂರ್ಣಗೊಳಿಸಿಲ್ಲ. ಇದರ ಬಗ್ಗೆ ಮಾನ್ಯ ವಸತಿ ಸಚಿವರು ಉತ್ತರವನ್ನು ಕೊಡಬೇಕು. ಮುಂದೆ ತೆಗೆದುಕೊಳ್ಳುವ ಕೆಲಸದ ಬಗ್ಗೆಯೂ ಸಹ ಇವರು ಹೇಳಿದ್ದಾರೆ. ಕಾಮಗಾರಿಗೋಸ್ಕರ 1994-95 ರಿಂದ 1996-97ರವರೆಗೆ ಒಟ್ಟು ರೂ.4.53 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ತಿಳಿಸಿದ್ದಾರೆ. ಆದರೆ ನನ್ನ ಮಾಹಿತಿ ಪ್ರಕಾರ ಇವತ್ತಿನವರೆಗೆ ಒಂದು ರೂಪಾಯಿಗಳನ್ನೂ ಸಹ ಖರ್ಚು ಮಾಡಿಲ್ಲ. ಯಾವ್ಯಾವ ಬಡಾವಣೆಗಳಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂಬ ಮಾಹಿತಿಯನ್ನು ಮಾನ್ಯ ಸಚಿವರು ತಿಳಿಸಿಬೇಕೆಂದು ಕೋರುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕಳೆದ ಮೂರು ವರ್ಷಗಳಿಂದ ಎಷ್ಟು ಖರ್ಚು ಮಾಡಿದ್ದೀರಿ ಎಂದು ಕೇಳಿದ್ದರು. ನಾವು 1994-95ರಿಂದ 1996-97ನೇ ಸಾಲಿನ ಅಂತ್ಯದವರೆಗೆ 4.53 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಈ ವರ್ಷ ನಾವು 6 ಲಕ್ಷ 75 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕು ಎಂದು ಇದ್ದೇವೆ. ಮಾನ್ಯ ಶಾಸಕರು ಏನು ಪಟ್ಟಿ ಕೊಟ್ಟಿದ್ದಾರೆ ಆ ಪ್ರಕಾರ ಸಮುದಾಯ ಭವನಕ್ಕೆ 3 ಲಕ್ಷ, ಕಿರು ನೀರು ಸರಬರಾಜು ಯೋಜನೆಗೆ 1.55 ಲಕ್ಷ, ರಸ್ತೆ ದುರಸ್ತಿ, ಚರಂಡಿ ಹಾಗೂ ಇತರೆ ಕೆಲಸಗಳಿಗೆ 1.10 ಲಕ್ಷ ರೂಪಾಯಿ, 6 ಆಸನವುಳ್ಳ ಶೌಚಾಲಯ 1 ಲಕ್ಷ ರೂಪಾಯಿ, ಬೀದಿ ದೀಪಗಳಿಗೆ 10 ಸಾವಿರ ರೂಪಾಯಿ ಖರ್ಚು ಮಾಡಬೇಕೆಂದು ಇದ್ದೇವೆ. ಅವರೇ ಒಟ್ಟಿಗೆ ಒಂದು ಪ್ರಪೋಸಲ್ ಕಳಿಸಿದ್ದಾರೆ. ಅದರಂತೆ ಈ ವರ್ಷ 1996-97ನೇ ಸಾಲಿನಲ್ಲಿ ನಾವು ಕಾರ್ಯಗತಗೊಳಿಸಬೇಕೆಂದು ಮಾಡಿದ್ದೇವೆ. ಕಳೆದ ಮೂರು ವರ್ಷದಲ್ಲಿ ಬರೇ 4.53 ಲಕ್ಷರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ಮಾನ್ಯ ಸದಸ್ಯರಲ್ಲಿ ಭಾವನೆ ಇದೆ. ಕಳೆದ ಮೂರು ವರ್ಷ ಹಣಕಾಸಿನ ಪರಿಸ್ಥಿತಿ ವಿಚಾರವಾಗಿ ನಮ್ಮಲ್ಲಿ ಬಜೆಟ್ ಗ್ರ್ಯಾಂಟ್ ಏನು ಇತ್ತು ಅದರಲ್ಲಿ 4.53 ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಈಗ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಕಡೆಯಿಂದ ಹಣ ಬರುತ್ತಿರುವುದರಿಂದ 6 ಲಕ್ಷ 75 ಸಾವಿರ ಕಾರ್ಯಗತಗೊಳಿಸುತ್ತಿದ್ದೇವೆ. ಅದರ ಜೊತೆಗೆ ಯಾವುದೋ ಒಂದು ಕಾಮಗಾರಿ ಇದೆ ಎಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದ್ದಿದ್ದಾರೆ. ಅದನ್ನು 15 ದಿವಸದಲ್ಲಿ ಕೆಲಸ ಮಾಡಿಕೊಡುವುದಕ್ಕೆ ನಾನು ಪ್ರಾಮಾಣಿಕವಾಗಿ ಪ್ರಯತ್ನಪಡುತ್ತೇನೆ.

ಶ್ರೀ ಪಿ.ಎಸ್.ಪ್ರಕಾಶ್: 4.53 ಲಕ್ಷ ಹಣ ಖರ್ಚು ಮಾಡಿದ್ದೇವೆಂದು ಹೇಳುತ್ತಾರೆ.50 ಸಾವಿರ ರೂಪಾಯಿ ಕೆಲಸ ಆಗಿಲ್ಲ. ಕೆಂಪಾಪುರ ಅಗ್ರಹಾರ, ನಾಗಮ್ಮ ನಗರ ಕೊಳಚೆ ಪ್ರದೇಶದಲ್ಲಿ ಒಂದು ಪಬ್ಲಿಕ್ ಟಾಯಿಲೆಟ್ ಕಟ್ಟುವುದಕ್ಕೆ ಬೆಡ್ ಕಟ್ಟಿ ಒಂದು ವರ್ಷ ಆಯಿತು. ಇಪತ್ತಿನವರೆಗೆ ಪೂರ್ಣಗೊಂಡಿಲ್ಲ ನಾಲ್ಕು ಸಾರಿ ಕೊಳೆಚೆನಿರ್ಮೂಲನಾ ಮಂಡಲಿಯ ಅಧ್ಯಕ್ಷರಿಗೆ ಪತ್ರ ಬರೆದಿದ್ದೇನೆ. ಪಾದಯಾತ್ರೆ ಮಾಡುವಾಗ

ಇವೊತ್ತಿನವರೆಗೆ ಒಬ್ಬ ಅಧಿಕಾರಿಯೂ ನನ್ನ ಜೊತೆಯಲ್ಲಿ ಬಂದಿಲ್ಲ. ಎಷ್ಟು ಸಾರಿ ಅವರಿಗೆ ಹೇಳಿಕಳಿಸಿದರೂ ಬರುವುದಿಲ್ಲ. ಒಂದು ವರ್ಷದಿಂದ ಪಬ್ಲಿಕ್ ಟಾಯಿಲೆಟ್ ಬೆಡ್ ಕಟ್ಟಿದ್ದಾರೆ, 50 ಸಾವಿರ ರೂಪಾಯಿಗಳ ಕೆಲಸ ಮಾಡಿಲ್ಲ, ಇನ್ನು 4 ಲಕ್ಷ 53 ಸಾವಿರ ರೂಪಾಯಿಗಳನ್ನು ಎಲ್ಲಿ ಖರ್ಚು ಮಾಡಿದ್ದಾರೆ ಎಂಬ ಬಗ್ಗೆ ಮಾಹಿತಿ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ: ಆ ಮಾಹಿತಿಯನ್ನೆಲ್ಲಾ ಕೊಟ್ಟಿದ್ದೇನೆ.

ಅಧ್ಯಕ್ಷರು: ಪ್ರಕಾಶ್ ಒಂದು ಕೆಲಸ ಮಾಡೋಣ, ಮಾನ್ಯ ಸಚಿವರಿಗೆ ನಾನು ಸೂಚನೆ ಕೊಡುತ್ತೇನೆ. ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಕರೆದು ತಾಕೀತು ಮಾಡುತ್ತಾರೆ. ನೀವು ನಿಮ್ಮ ಪ್ರದೇಶದಲ್ಲಿ ಪಾದಯಾತ್ರೆ ಮಾಡುವಾಗ ನಿಮ್ಮ ಜೊತೆಗೆ ಬಂದು ನಿಮ್ಮ ಕ್ಷೇತ್ರದಲ್ಲಿ ಎಲ್ಲೆಲ್ಲಿ ಏನೇನು ಕೆಲಸ ಆಗಬೇಕು ಆ ಕಡೆ ತಕ್ಷಣ ಗಮನ ಹರಿಸಬೇಕು ಎಂದು ಹೇಳುತ್ತಿದ್ದೇನೆ.

ಶ್ರೀ ಪಿ.ಎಸ್.ಪ್ರಕಾಶ್: ಕೊಳಚೆ ಮಂಡಲಿ ಅಧಿಕಾರಿಗಳು ಸಚಿವರನ್ನು ತಪ್ಪು ದಾರಿಗೆ ಎಳೆದಿದ್ದಾರೆ ಏನೂ ಕೆಲಸ ಮಾಡಿಲ್ಲ.

ಅಧ್ಯಕ್ಷರು: ಒಂದು ಕೆಲಸ ಮಾಡಿ ನೀವು ಕಂಪ್ಲೇಂಟ್ ಕೊಟ್ಟುಬಿಡಿ ಅವರು ಅದರ ಮೇಲೆ ತನಿಖೆ ಮಾಡಿಸುತ್ತಾರೆ.

ವಿಷಯ: ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಬಸ್ ಪಾಸುಗಳು.

502 (3961)

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ವಾತಂತ್ರ್ಯ ಹೋರಾಟಗಾರರಿಗೆ ಸೂಪರ್ ಡೀಲಕ್ಸ್ ಬಸ್ಸಿನಲ್ಲಿ ಉಚಿತ ಬಸ್ ಪ್ರಯಾಣದ ಪಾಸ್ ನೀಡಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಆ) ಉಚಿತ ಬಸ್ ಪ್ರಯಾಣದ ಪಾಸ್ ನೀಡಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಸರ್ಕಾರವು ತೀರ್ಮಾನಿಸಿದಂತೆ ಪ್ರಸ್ತುತ ಸ್ವಾತಂತ್ರ್ಯ ಹೋರಾಟಗಾರರಿಗೆ, ಸ್ವಾತಂತ್ರ್ಯ ಯೋಧರ ವಿಧವೆ: ವಿಧುರರಿಗೆ ಸಾಮಾನ್ಯ ಮತ್ತು ವೇಗದೂತ ವಾಹನಗಳಲ್ಲಿ ಮಾತ್ರ ಪ್ರಯಾಣಿಸಲು ಉಚಿತ ಫೋಟೋ ಬಸ್ ಪಾಸ್‌ಗಳನ್ನು ನೀಡಲಾಗುತ್ತಿದೆ.